ಸೃಜನಿ

**SRUJANI: Indian Journal of Innovative Research and Development (SIJIRD)**
Volume-4 Issue 2, May-June 2025, Pp. 1-6
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬ್ಯಾಂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರ ಸಮಸ್ಯೆ ಮತ್ತು ಸವಾಲುಗಳು

**ಕವಿತ ಯು.ಕೆ.**[1] **ಮತ್ತು ಡಾ. ಆಂಜನಪ್ಪ ಬಿ.ಹೆಚ್.**[2]
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು,
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ ಶಂಕರಘಟ್ಟ, ಶಿವಮೊಗ್ಗ,

**Abstract:**
*ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಹೆಚ್ಚು ಶಿಕ್ಷಿತರಾಗುತ್ತಿರುವುದರಿಂದ ಹಾಗೂ ಕೈಗಾರಿಕಾ ಬೆಳವಣಿಗೆಯಿಂದಾಗಿ ಮಹಿಳೆಯರಿಗೆ ಹೆಚ್ಚಿನ ದುಡಿಮೆಯ ಅವಕಾಶಗಳು ಹೆಚ್ಚಾಗಿವೆ. ಭಾರತದಲ್ಲಿ ಸ್ತ್ರೀಯರ ಆರ್ಥಿಕ ಸಹಭಾಗಿತ್ವ ಕಡಿಮೆ ಎಂದು ಅಂಕಿ–ಅಂಶಗಳು ತಿಳಿಸಿವೆ. ಒಂದು ಕಾಲದಲ್ಲಿ ಕೇವಲ ಪುರುಷರಿಗೆ ಸೀಮಿತವಾಗಿರುವ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾಗುತ್ತಿದೆ. ಆದರೆ ಮಹಿಳಾ ಉದ್ಯೋಗಿಗಳ ಮೇಲೆ ವಿವಿಧ ರೀತಿಯ ದೌರ್ಜನ್ಯಗಳು ನಡೆಯುತ್ತಲೆ ಇದೆ. ಇಂದು ಬಹುತೇಕ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಪ್ರಮಾಣ ಸ್ವಲ್ಪಮಟ್ಟಿಗೆ ಹೆಚ್ಚಾಗುತ್ತಿದೆ. ಪ್ರಸ್ತುತ ಅಧ್ಯಯನವು ಬ್ಯಾಂಕ್ ಮಹಿಳಾ ನೌಕರರ ಮತ್ತು ಗ್ರಾಹಕರ ಸಂಬಂಧಗಳನ್ನು ತಿಳಿಯುವ ಉದ್ದೇಶವನ್ನು ಹೊಂದಿದೆ. ಅಧ್ಯಯನಕ್ಕೆ ಪೂರಕವಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲು ಶಿವಮೊಗ್ಗ ಜಿಲ್ಲೆಯಲ್ಲಿ ವಾಸವಾಗಿರುವ 50 ಜನ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ನೌಕರರುಗಳನ್ನು ಮಾಹಿತಿದಾರರನ್ನಾಗಿ ಸರಳ ಯಾದೃಚ್ಛಿಕ ಮಾದರಿ ವಿಧಾನದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರಸ್ತುತ ಬ್ಯಾಂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರು ಹಲವಾರು ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುತ್ತಿರುವುದು ಅಧ್ಯಯನದಿಂದ ತಿಳಿದುಬಂದಿದೆ.*

**Keywords:** *ಬ್ಯಾಂಕಿಂಗ್ ಕ್ಷೇತ್ರ, ಮಹಿಳಾ ಉದ್ಯೋಗಿಗಳು, ಆಧುನೀಕರಣ, ತಂತ್ರಜ್ಞಾನ,*

## ಪೀಠಿಕೆ

ಸಮಾಜದ ಸುಭದ್ರ ಸ್ಥಿತಿಗೆ ಸ್ತ್ರೀಯರ ಕೊಡುಗೆ ಅಪಾರವಾದುದು. ಸಮಾಜವೆಂಬ ನಿರಂತರ ಚಲಿಸುವ ರಥಕ್ಕೆ ಇರುವ ಎರಡು ಗಾಲಿಗಳೇ ಪುರುಷ ಮತ್ತು ಸ್ತ್ರೀ. ಈ ಎರಡು ಗಾಲಿಗಳು ಸಮಾನ ಸ್ಥಾನಮಾನ ಮತ್ತು ಬಲ ಹೊಂದಿರುವುದು ಸೂಕ್ತ. ಇವೆರಡರಲ್ಲಿ ಯಾವುದೊಂದನ್ನು ಕಡೆಗಣಿಸಿದರೂ ಪರಿಣಾಮ ನಷ್ಟ. ಅಂತೆಯೇ ಸದೃಢ ಸಮಾಜದ ಅಸ್ತಿತ್ವಕ್ಕೆ ಸದೃಢ ಪುರುಷ ಹಾಗೂ ಸ್ತ್ರೀಯರ ಇರುವಿಕೆ ಅತ್ಯಗತ್ಯ. ವಸ್ತುಸ್ಥಿತಿ ಹೀಗಿರುವುದಾದರೂ ವಾಸ್ತವಿಕ ಬದುಕಿನಲ್ಲಿ ಪುರುಷ ತಾನು ಹೆಚ್ಚುಗಾರಿಕೆಯಿಂದ ಮೆರೆದಿರುವುದನ್ನು, ಸ್ತ್ರೀಯನ್ನು ಕೀಳಾಗಿ ಕಂಡಿರುವುದನ್ನು ಕಾಣುತ್ತೇವೆ. ಪ್ರಪಂಚದ ವಿವಿಧ ಸಮಾಜಗಳಲ್ಲಿ ಸ್ತ್ರೀಯರಿಗಿರುವ ಸ್ಥಾನಮಾನದ ಆಧಾರದ ಮೇಲೆ ಆ ಸಮಾಜದ

***Please cite this article as:*** ಕವಿತ ಯು.ಕೆ. ಮತ್ತು ಆಂಜನಪ್ಪ ಬಿ.ಹೆಚ್. (2025). ಬ್ಯಾಂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರ ಸಮಸ್ಯೆ ಮತ್ತು ಸವಾಲುಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(2), 1–6

ಗುಣಮಟ್ಟವನ್ನು ಅಳೆಯಬಹುದಾಗಿದೆ. ಎಲ್ಲಿ ಸ್ತ್ರೀಯರಿಗೆ ಉನ್ನತ ಸ್ಥಾನವಿರುತ್ತದೋ ಅಲ್ಲಿ ಅದರ ಗುಣಮಟ್ಟ ಉನ್ನತವಾಗಿರುತ್ತದೆ, ಇಲ್ಲವಾದರೆ ಅದರ ಗುಣಮಟ್ಟ ಅಧೋಗತಿಗೆ ಇಳಿದಿರುತ್ತದೆ. ಒಂದು ಸಮಾಜದ ಉಚ್ಛ್ರಾಯ ಸ್ಥಿತಿ ಮತ್ತು ಅಧೋಗತಿಗಳು ಅದು ಕೊಡಮಾಡಿರುವ ಸ್ತ್ರೀಯರ ಸ್ಥಾನಮಾನಗಳಿಗೆ ಅನುಗುಣವಾಗಿ ಪ್ರಾಪ್ತವಾಗುತ್ತವೆ.

ಕುಟುಂಬದಲ್ಲಿ ಎದುರಾಗಬಹುದಾದ ಸಮಸ್ಯೆಗಳೆಂದರೆ ವರದಕ್ಷಿಣೆ, ವಿಚ್ಛೇದನ, ಹಿಂಸೆ, ಮಹಿಳೆಯರ ಸುರಕ್ಷತೆಯ ದೃಷ್ಟಿಯಿಂದ ಶಿಕ್ಷಣ, ಉದ್ಯೋಗ, ರಾಜಕೀಯ ಭಾಗವಹಿಸುವಿಕೆ ಮಹಿಳೆಯರನ್ನು ಹೆಚ್ಚು ಸ್ವಾವಲಂಬಿಯನ್ನಾಗಿಸುತ್ತದೆ. ಕೇವಲ ಶಿಕ್ಷಣ ಉದ್ಯೋಗ ಮಾತ್ರವಲ್ಲದೆ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯಿಂದ ಅಭಿವೃದ್ಧಿ ಸಾಧ್ಯವಾಗುವುದರ ಜೊತೆಗೆ ಮಹಿಳೆಯರಿಗೆ ದುಡಿಮೆಯ ಅವಕಾಶವನ್ನು ಕಲ್ಪಿಸಿಕೊಡಬೇಕು, ಕೇವಲ ಮನೆಗೆ ಸೀಮಿತಪಡಿಸದೆ ಸಾರ್ವಜನಿಕ ಕ್ಷೇತ್ರಗಳಲ್ಲಿ ಸ್ವ–ಇಚ್ಛೆಯಿಂದ ಭಾಗವಹಿಸಿದರೆ ಅವರ ಜೀವನ ಮಟ್ಟ ಸುಧಾರಿಸಲು ಸಾಧ್ಯವಾಗುತ್ತದೆ. ಮಹಿಳೆಯರು ಸರ್ವತೋಮುಖ ಅಭಿವೃದ್ಧಿ ಸಾಧಿಸಬೇಕಾದರೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅನೇಕ ರೀತಿಯಲ್ಲಿ ಯೋಜನೆಯನ್ನು ರೂಪಿಸಿ ಎಲ್ಲಾ ವರ್ಗದ ಮಹಿಳೆಯರಿಗೂ ತಲುಪುವ ಹಾಗೆ ಮಾಡಬೇಕಾಗುತ್ತದೆ.

**ಸಾಹಿತ್ಯಾವಲೋಕನ**

ಶ್ರೀಮತಿ (2001) ಅವರು ಆಧುನಿಕ ಭಾರತದಲ್ಲಿ ಮಹಿಳೆಯರ ಕುರಿತು ಅಧ್ಯಯನ ನಡೆಸಿದ್ದು, ಭಾರತೀಯ ಮಹಿಳೆಯ ಜೀವನದ ಎಲ್ಲಾ ಹೋರಾಟ, ಸಾಧನೆಯ ಬಗ್ಗೆ ಬಹಳ ಸವಿಸ್ತಾರವಾಗಿ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. ಮಹಿಳೆಯ ಬೆಳವಣಿಗೆಯಲ್ಲಿ ಹೇರಲಾದ ಹಳೆಯ ಕಟ್ಟುಪಾಡುಗಳು, ಒಂದು ಚೌಕಟ್ಟಿನ ಒಳಗೆ ಇರಬೇಕಾದ ಸ್ಥಿತಿಗತಿಗಳಿದ್ದು, ಅದರಿಂದ ಹೇಗೆ ಹೊರಬಂದು ಆಧುನಿಕ ಜೀವನದಲ್ಲಿ ತನ್ನ ನಿಲುವುಗಳನ್ನು, ಬಯಕೆಗಳನ್ನು ಹೇಗೆ ಈಡೇರಿಸಿಕೊಳ್ಳುತ್ತಾಳೆ ಹಾಗೂ ಆಧುನಿಕ ತಂತ್ರಜ್ಞಾನದೊಂದಿಗೆ ಜೀವನ ಕಟ್ಟಿಕೊಳ್ಳಲು ಹೇಗೆ ಪ್ರಯತ್ನಿಸುತ್ತಾಳೆ ಎಂಬುದನ್ನು ತಿಳಿಯುವುದಾಗಿದೆ. ಹಲವಾರು ವರ್ಷಗಳಿಂದ ನಾನಾ ಕಾರಣಗಳಿಂದ ನಾನಾ ರೀತಿಯಲ್ಲಿ ಶೋಷಣೆ, ಹಿಂಸೆಯನ್ನು ಎದುರಿಸುತ್ತಾ ಬಂದಿದ್ದಾರೆ. ಹೆಣ್ಣನ್ನು ದುರ್ಬಲಳು ಎಂಬ ಕಾರಣದಿಂದಾಗಿ ಒಂದು ಚೌಕಟ್ಟಿನಲ್ಲಿರಿಸಲಾಗಿದೆ. ಹಿಂಸೆ, ದೌರ್ಜನ್ಯ, ಶೋಷಣೆಯಿಂದ ದೂರ ಬಂದು ನವ ಭಾರತದಲ್ಲಿ ಹೊಸ ಜೀವನ ಕಟ್ಟಿಕೊಳ್ಳುವುದು ಸುಲಭದ ಮಾತಲ್ಲ. ಸ್ವಾಭಾವಿಕವಾಗಿ ಹೆಣ್ಣು ದುರ್ಬಲಳು ಎಂಬ ಕಾರಣದಿಂದ ಬಹು ಹಿಂದಿನಿಂದಲೂ ಒತ್ತಡದ ಜೀವನವನ್ನು ಅನುಭವಿಸುತ್ತಿದ್ದಾಳೆ ಹಾಗೂ ಭಯದ ವಾತಾವರಣದಲ್ಲಿ ಬದುಕುತ್ತಿದ್ದಾಳೆ. ಇತಿಹಾಸದುದ್ದಕ್ಕೂ ಬೇರೆಯವರ ಅಧೀನದಲ್ಲಿ ಜೀವಿಸಿದ್ದಾಳೆ. ತದನಂತರ ಹೆಣ್ಣು ಎಲ್ಲಾ ಸಂಕೋಲೆಗಳಿಂದ ಹೊರಬಂದು ಆಧುನಿಕ ಯುಗದಲ್ಲಿ ಸ್ವತಂತ್ರ ಜೀವನವನ್ನು ಕಟ್ಟಿಕೊಳ್ಳಲು ಶ್ರಮಿಸುತ್ತಿದ್ದಾಳೆ. ಈ ಎಲ್ಲಾ ಕಷ್ಟಗಳಿಗೂ ಸ್ವಾಭಾವಿಕವಾಗಿ ಬಂದಿರುವ ಹೆಣ್ಣಿನ ಜೀವನ ಶೈಲಿಯನ್ನು ಲೇಖಕರು ಉಲ್ಲೇಖಿಸಿದ್ದಾರೆ.

ರಾಯ್ (2009) ಅವರು ಭಾರತದಲ್ಲಿ ಮಹಿಳಾ ಸಬಲೀಕರಣದ ಕುರಿತು ಅಧ್ಯಯನ ನಡೆಸಿದ್ದು, ಭಾರತವು ಪುರುಷ ಪ್ರಧಾನ ರಾಷ್ಟ್ರವಾಗಿದ್ದು, ದೇಶದ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರಿದ್ದು, ಅವರು ಪುರುಷರಷ್ಟೇ ಸರಿಸಮಾನವಾಗಿ ಕಾರ್ಯನಿರ್ವಹಿಸಲು ಸಬಲರಾಗಿಲ್ಲ. ಮಹಿಳೆಯರ ಸಬಲೀಕರಣವಾಗ ಬೇಕಾದ ಏಕೈಕ ಮಾರ್ಗ ಎಂದರೆ ಶಿಕ್ಷಣ, ನಂತರ ಉದ್ಯೋಗ, ರಾಜಕೀಯ ಕ್ಷೇತ್ರಗಳಲ್ಲೂ ಮಹಿಳೆಯರ ಪಾತ್ರ ಹೆಚ್ಚಾಗಬೇಕಾಗಿದೆ. ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯರಿಗೆ ಸಮಾನ ವೇತನ ಹಾಗೂ ಗೌರವ ನೀಡಿದರೆ ಮಹಿಳೆಯರ ಸಬಲೀಕರಣವನ್ನು

ಕಾಣಬಹುದಾಗಿದೆ. ಇಲ್ಲಿ ಲೇಖಕರು ಮಹಿಳೆಯರು ಎದುರಿಸುವ ಸಮಸ್ಯೆ ಮತ್ತು ಸವಾಲುಗಳ ಬಗ್ಗೆ ವಿವರಿಸಿದ್ದಾರೆ.

ಸಬಿಹಾ ಭೂಮಿಗೌಡ (2019) ಅವರು ಮಹಿಳೆಯರು ಎದುರಿಸುತ್ತಿರುವ ಇಂದಿನ ಸವಾಲುಗಳ ಕುರಿತು ಅಧ್ಯಯನ ನಡೆಸಿದ್ದು, ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ಕಿರುಕುಳ ಹೆಚ್ಚಾಗುತ್ತಿದ್ದು ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯರ ಮೇಲೆ ಒಂದಲ್ಲಾ ಒಂದು ರೀತಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಕಿರುಕುಳ ಎನ್ನುವುದು ಶಿಕ್ಷಣ ಕ್ಷೇತ್ರವನ್ನು ಸಹ ಬಿಟ್ಟಿಲ್ಲ. ಒತ್ತಡದ ಜೀವನದಲ್ಲಿ ಮಹಿಳೆ ಜೀವನ ಸಾಗಿಸುತ್ತಿದ್ದಾಳೆ. ಹೊರಗಿನಿಂದ ಆಗುವ ಸಮಸ್ಯೆಗಳು ಬೇರೆ ಹಾಗೆಯೇ ಕೌಟುಂಬಿಕ ದೌರ್ಜನ್ಯಗಳು ಹೆಚ್ಚಾಗುತ್ತಿದೆ. ಮನೆಯ ಹಾಗೆ ಇತರೆ ಸದಸ್ಯರಿಂದ ಪ್ರತಿನಿತ್ಯ ಹೆಣ್ಣು ಶೋಷಣೆಗೆ ಒಳಗಾಗಿ ಹೀಯಾಳಿಕೆ, ನಿರ್ಲಕ್ಷ, ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾಳೆ. ಇಂತಹ ದೌರ್ಜನ್ಯಗಳು ಕಡಿಮೆಯಾಗಬೇಕಾದರೆ ಸ್ತ್ರೀ ಮಾತ್ರ ಬದಲಾದರೆ ಸಾಲದು, ಪುರುಷ ಸಹ ಬದಲಾಗಬೇಕಾಗಿದೆ. ಹೆಣ್ಣು ಮಕ್ಕಳ ವಿಷಯಕ್ಕೆ ಬಂದರೆ ಉನ್ನತ ಶಿಕ್ಷಣ, ವಿವಾಹದಲ್ಲಿ ಒಂದನ್ನು ಆಯ್ಕೆ ಮಾಡಬೇಕಾದ ಸ್ಥಿತಿ ಬಂದರೆ ಪುರುಷರಿಗೆ ವಿವಾಹಕ್ಕೆ ಹೆಚ್ಚು ಒತ್ತು ನೀಡುತ್ತಾರೆ. ಮಗ ಮತ್ತು ಮಗಳ ಶಿಕ್ಷಣದ ವಿಷಯದಲ್ಲಿ ಮಗನ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ದೊರೆಯುತ್ತದೆ. ಮಹಿಳೆಯರ ಮೇಲೆ ಸಾಮಾಜಿಕ, ಧಾರ್ಮಿಕ ಒತ್ತಡ ಹೆಚ್ಚಾಗುತ್ತದೆ. ಇನ್ನು ಸಮಾಜದಲ್ಲಿ ವರದಕ್ಷಿಣೆ, ಸಾವು, ಹೆಣ್ಣಿನ ನಡತೆಯ ಸಂಶಯ, ಮನೆಯಿಂದ ಹೊರಹಾಕುವುದು, ಹಾಗೆ ವಿಚ್ಛೇದನ ಪ್ರಕರಣಗಳು ಇಂದಿನ ದಿನಗಳಲ್ಲಿ ಹೆಚ್ಚಾಗಿದ್ದು ಮಹಿಳೆಯರು ಅನೇಕ ಸವಾಲುಗಳನ್ನು ಎದುರಿಸುತ್ತಾ ಜೀವನ ಸಾಗಿಸುತ್ತಿದ್ದಾರೆ. ಒಟ್ಟಾರೆಯಾಗಿ ಈ ಗ್ರಂಥದಲ್ಲಿ ಮಹಿಳೆಯರು ಸಮಸ್ಯೆ ಮತ್ತು ಸವಾಲುಗಳನ್ನು ಹೇಗೆ ಎದುರಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.

**ಅಧ್ಯಯನದ ಉದ್ದೇಶಗಳು**

- ಮಹಿಳಾ ನೌಕರರ ಮತ್ತು ಗ್ರಾಹಕರ ಸಂಬಂಧಗಳನ್ನು ತಿಳಿಯುವುದು.
- ಮಹಿಳಾ ನೌಕರರಿಗೆ ಸರ್ಕಾರದ ವಿಶೇಷ ಸೌಲಭ್ಯಗಳ ಕುರಿತು ಅರ್ಥೈಸುವುದು.

**ಅಧ್ಯಯನ ಕ್ಷೇತ್ರ ಮತ್ತು ಮಾದರಿ ಆಯ್ಕೆ**

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕಾಗಿ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲು ಶಿವಮೊಗ್ಗ ಜಿಲ್ಲೆಯಲ್ಲಿ ವಾಸವಾಗಿರುವ 50 ಜನ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ನೌಕರರುಗಳನ್ನು ಮಾಹಿತಿದಾರರನ್ನಾಗಿ ಸರಳ ಯಾದೃಚ್ಛಿಕ ಮಾದರಿ ವಿಧಾನದ ಮೂಲಕ ಆಯ್ಕೆ ಮಾಡಿಕೊಳ್ಳಲಾಗಿದೆ.

**ಸಂಶೋಧನಾ ವಿಧಾನ ಮತ್ತು ತಂತ್ರಗಳು**

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ವಿವಿಧ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಮಾಹಿತಿ ಸಂಗ್ರಹಣೆಯಲ್ಲಿ ಪ್ರಾಥಮಿಕ ಮತ್ತು ಆನುಷಂಗಿಕ ಮೂಲಗಳು ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಇದರಿಂದ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಸ್ವರೂಪದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

**ಪ್ರಾಥಮಿಕ ಮಾಹಿತಿ**ಯನ್ನು ಪ್ರಶ್ನಾವಳಿ ಮತ್ತು ಅವಲೋಕನ ವಿಧಾನಗಳನ್ನು ಬಳಸಿಕೊಂಡು ಸಂಗ್ರಹಿಸಲಾಗಿದೆ. ಸಂಶೋಧನೆಗೆ ಅಗತ್ಯವಿರುವ ಮಾಹಿತಿಯನ್ನು ಸಂಗ್ರಹಿಸಲು ಪ್ರಶ್ನಾವಳಿಯನ್ನು ಸಿದ್ಧಪಡಿಸಿದ ನಂತರ ಮಾರ್ಗದರ್ಶಕರ ಸಲಹೆಯಂತೆ ಪೂರ್ವ ಪರೀಕ್ಷೆಗೆ ಒಳಪಡಿಸಿ ತಿದ್ದುಪಡಿ ಮಾಡಿ ಅಂತಿಮಗೊಳಿಸಲಾಯಿತು. ನಂತರ 50 ಮಹಿಳಾ ನೌಕರರನ್ನು ಭೇಟಿ ಮಾಡಿ ಪ್ರಶ್ನಾವಳಿಯನ್ನು ನೀಡಿ ಮಾಹಿತಿಯನ್ನು ಸಂಗ್ರಹಿಸಲಾಯಿತು.

**ಅವಲೋಕನ:** ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಕ್ಷೇತ್ರಕ್ಕೆ ನೇರವಾಗಿ ಭೇಟಿ ನೀಡಿ ವಾಸ್ತವ ಸ್ಥಿತಿಗಳನ್ನು ಸಮಾಜಶಾಸ್ತ್ರೀಯ

ದೃಷ್ಟಿಕೋನದಿಂದ ಅವಲೋಕಿಸಿ ವಸ್ತುನಿಷ್ಠ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ ಹಾಗೂ ಮಹಿಳಾ ನೌಕರರನ್ನು ಭೇಟಿ ಮಾಡಿ ಅವರ ಇಂದಿನ ಸ್ಥಿತಿಗಳನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ಅವಲೋಕಿಸಿ, ಟಿಪ್ಪಣಿ ಮಾಡಿಕೊಳ್ಳಲಾಗಿದೆ.

**ಆನುಷಂಗಿಕ ಮಾಹಿತಿ**ಯನ್ನು ಪ್ರಕಟಿತ ಪುಸ್ತಕಗಳು, ಲೇಖನಗಳು, ಗ್ರಂಥಗಳು, ಸರ್ಕಾರಿ ಇಲಾಖಾ ದಾಖಲಾತಿಗಳು, ಸಮೀಕ್ಷಾ ವರದಿಗಳು, ಪತ್ರಿಕೆಗಳು, ಅಂತರ್ಜಾಲ, ಮಹಾಪ್ರಬಂಧಗಳು, ವಿಶ್ವಕೋಶಗಳು ಇನ್ನೂ ಮುಂತಾದವುಗಳಿಂದ ಅಧ್ಯಯನಕ್ಕೆ ಅವಶ್ಯಕವಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಮಾಹಿತಿ ವಿಶ್ಲೇಷಣೆ**

ವಿವಿಧ ಮೂಲಗಳಿಂದ ಸಂಗ್ರಹಿಸಿದ ಸಂಶೋಧನಾ ಮಾಹಿತಿಯನ್ನು ಪರಿಮಾಣಾತ್ಮಕ ಹಾಗೂ ಗುಣಾತ್ಮಕ ವಿಧಾನದಿಂದ ವಿಶ್ಲೇಷಿಸಿ, ಸಂಕೇತೀಕರಣ, ಪರಿಷ್ಕರಣೆ, ವರ್ಗೀಕರಣ ಹಾಗೂ ಸೂಚೀಕರಣದ ಮೂಲಕ ಹಾಗೂ ಅಗತ್ಯವಿದ್ದಷ್ಟು ಸಂಖ್ಯಾಶಾಸ್ತ್ರೀಯ ವಿಧಾನಗಳನ್ನು ಬಳಸಿಕೊಂಡು ಸಮಾಜಶಾಸ್ತ್ರೀಯ ಚೌಕಟ್ಟಿನಲ್ಲಿ ಮಾಹಿತಿಯನ್ನು ಕೋಷ್ಟಕಗಳ ಮೂಲಕ ವಿಶ್ಲೇಷಿಸಲಾಗಿದೆ.

**ಕೋಷ್ಟಕ 1: ಗ್ರಾಹಕರೊಂದಿಗೆ ವ್ಯವಹರಿಸುವಾಗ ಭಾಷಾ ಸಮಸ್ಯೆ ಎದುರಿಸುತ್ತಿರುವುದರ ವಿವರ**

| **ಭಾಷೆಯ ಸಮಸ್ಯೆ ಎದುರಿಸುತ್ತಿರುವುದು** | **ಆವೃತ್ತಿ** | **ಶೇಕಡವಾರು** |
|---|---|---|
| ಹೌದು | 38 | 76.00 |
| ಇಲ್ಲ | 12 | 24.00 |
| **ಒಟ್ಟು** | **50** | **100.00** |

ಮೇಲ್ಕಂಡ ಕೋಷ್ಟಕದಲ್ಲಿ ಗ್ರಾಹಕರೊಂದಿಗೆ ವ್ಯವಹರಿಸುವಾಗ ಭಾಷಾ ಸಮಸ್ಯೆ ಎದುರಿಸುತ್ತಿರುವುದರ ವಿವರವನ್ನು ತಿಳಿಸಲಾಗಿದೆ. ಸಂದರ್ಶಿತ ಒಟ್ಟು 50 ಜನ ಮಾಹಿತಿದಾರರಲ್ಲಿ ಶೇಕಡ 76ರಷ್ಟು ಭಾಷಾ ಸಮಸ್ಯೆ ಎದುರಿಸುತ್ತಿರುವುದಾಗಿ ತಿಳಿಸಿದರೆ, ಶೇಕಡ 24ರಷ್ಟು ಗ್ರಾಹಕರೊಂದಿಗೆ ವ್ಯವಹರಿಸುವಾಗ ಭಾಷಾ ಸಮಸ್ಯೆ ಎದುರಿಸುತ್ತಿಲ್ಲ ಎಂದು ತಿಳಿಸಿದ್ದಾರೆ. ಕಾರಣ ಬ್ಯಾಂಕುಗಳಲ್ಲಿ ನೌಕಕರರು ಹೆಚ್ಚಿನದಾಗಿ ಹೊರ ರಾಜ್ಯಗಳಿಂದ ಬಂದು ಇಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಸ್ಥಳೀಯ ಭಾಷೆಯನ್ನು ಕಲಿಯಲು ಸ್ವಲ್ಪ ಮಟ್ಟಿನ ಆಸಕ್ತಿ ಹೊಂದಿದ್ದರೂ ಸಹ 2–3 ವರ್ಷಕ್ಕೆ ವರ್ಗಾವಣೆಯಾಗುವುದರಿಂದ ಸಂಪೂರ್ಣ ಭಾಷೆಯ ಹಿಡಿತದ ಸಮಸ್ಯೆ ಕಂಡುಬಂದಿದೆ.

**ಕೋಷ್ಟಕ 2: ಬ್ಯಾಂಕ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಉದ್ಯೋಗಿಗಳಿಗಿರುವ ಸರ್ಕಾರಿ ಸೌಲಭ್ಯಗಳು**

| **ಸೌಲಭ್ಯಗಳು** | **ಆವೃತ್ತಿ (n=50)** | **ಶೇಕಡವಾರು** |
|---|---|---|
| ಮಾತೃತ್ವ ರಜೆ | 50 | 100.00 |
| ಶಿಶುಪಾಲನಾ ರಜೆ | 35 | 70.00 |
| ವೈದ್ಯಕೀಯ ಸೌಲಭ್ಯ | 50 | 100.00 |

ಮೇಲ್ಕಂಡ ಕೋಷ್ಟಕದಲ್ಲಿ ಬ್ಯಾಂಕ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಉದ್ಯೋಗಿಗಳಿಗಿರುವ ಸರ್ಕಾರಿ ಸೌಲಭ್ಯಗಳ ಕುರಿತು ಚರ್ಚಿಸಲಾಗಿದೆ. ಸಂದರ್ಶಿತ ಒಟ್ಟು 50 ಜನ ಮಾಹಿತಿದಾರರಲ್ಲಿ ಶೇಕಡ 100ರಷ್ಟು ಮಾತೃತ್ವ ರಜೆ ಸೌಲಭ್ಯ ಇರುವುದಾಗಿ ತಿಳಿಸಿದರೆ, ಶೇಕಡ 70ರಷ್ಟು ಶಿಶುಪಾಲನಾ ರಜೆ ಇರುವುದಾಗಿ ಮತ್ತು ಶೇಕಡ 100ರಷ್ಟು ಸರ್ಕಾರ ತಮಗೆ ವೈದ್ಯಕೀಯ ಸೌಲಭ್ಯ ವ್ಯವಸ್ಥೆ ಕಲ್ಪಿಸಿರುವುದಾಗಿ ತಿಳಿಸಿದ್ದಾರೆ. ಇಲ್ಲಿ ಕಡಿಮೆ ಪ್ರಮಾಣದಲ್ಲಿ ಶೇಕಡ 70ರಷ್ಟು ಶಿಶುಪಾಲನಾ ರಜೆ ಇರುವುದಾಗಿ ತಿಳಿಸಿದ್ದು, ಸರ್ಕಾರ ಈ ಸೌಲಭ್ಯವನ್ನು ಇತ್ತೀಚಿನದಾಗಿ ಬಿಡುಗಡೆಗೊಳಿಸಿರುವ ಕಾರಣ ಅಲ್ಲದೆ, ಹುಟ್ಟಿದ ಮಕ್ಕಳಿಗೆ 18 ವರ್ಷ ವಯಸ್ಸಿನವರಾಗಿದ್ದರೆ ಮಾತ್ರ ಈ ಸೌಲಭ್ಯವನ್ನು ಪಡೆಯಬಹುದಾಗಿದ್ದು, ಹೆಚ್ಚಿನ ಬ್ಯಾಂಕ್ ಮಹಿಳಾ

ನೌಕರರ ಮಕ್ಕಳು 18 ವರ್ಷ ವಯಸ್ಸಿಗಿಂತ ಮೇಲ್ಪಟ್ಟವರಾಗಿರುವುದರಿಂದ ಅಧಿಕ ಪ್ರಮಾಣದ ನೌಕರರು ಈ ಸೌಲಭ್ಯ ಪಡೆಯುವಲ್ಲಿ ವಿಫಲರಾಗಿದ್ದಾರೆ.

**ಕೋಷ್ಟಕ 3: ಬ್ಯಾಂಕಿನಲ್ಲಿ ಮಹಿಳಾ ಗ್ರಾಹಕರಿಗಿರುವ ವಿಶೇಷ ಸೌಲಭ್ಯಗಳು**

| ಸೌಲಭ್ಯಗಳು | ಆವೃತ್ತಿ | ಶೇಕಡವಾರು |
|---|---|---|
| ಕುಡಿಯುವ ನೀರು | 20 | 40.00 |
| ಆಸನದ ವ್ಯವಸ್ಥೆ | 28 | 56.00 |
| ಇತರೆ | 02 | 04.00 |
| **ಒಟ್ಟು** | **50** | **100.00** |

ಮೇಲ್ಕಂಡ ಕೋಷ್ಟಕದಲ್ಲಿ ಬ್ಯಾಂಕಿನಲ್ಲಿ ಮಹಿಳಾ ಗ್ರಾಹಕರಿಗಿರುವ ವಿಶೇಷ ಸೌಲಭ್ಯಗಳ ಕುರಿತು ಚರ್ಚಿಸಲಾಗಿದೆ. ಒಟ್ಟು 50 ಜನ ಮಾಹಿತಿದಾರರಲ್ಲಿ ಶೇಕಡ 40ರಷ್ಟು ಕುಡಿಯುವ ನೀರಿನ ಸೌಲಭ್ಯವಿರುವುದಾಗಿ ತಿಳಿಸಿದರೆ, ಶೇಕಡ 56ರಷ್ಟು ಆಸನದ ವ್ಯವಸ್ಥೆ ಇರುವುದಾಗಿ ಮತ್ತು ಇನ್ನುಳಿದಂತೆ ಶೇಕಡ 4ರಷ್ಟು ಇತರೆ ಸೌಲಭ್ಯಗಳಾದ ಎ.ಟಿ.ಎಂ. ಸೌಲಭ್ಯ, ಪಾಸ್‌ಬುಕ್ ಎಂಟ್ರಿ ಸೌಲಭ್ಯಗಳು ದೊರೆಯುವುದಾಗಿ ತಿಳಿಸಿದ್ದಾರೆ.

**ಕೋಷ್ಟಕ 4: ಬ್ಯಾಂಕುಗಳಲ್ಲಿ ಲಭ್ಯವಿರುವ ಮೂಲಭೂತ ಸೌಲಭ್ಯಗಳ ವಿವರ**

| ಮೂಲಭೂತ ಸೌಲಭ್ಯಗಳು | ಆವೃತ್ತಿ | ಶೇಕಡವಾರು |
|---|---|---|
| ಪ್ರತ್ಯೇಕ ಶೌಚಾಲಯ | 21 | 42.00 |
| ವಿಶ್ರಾಂತಿ ಕೊಠಡಿ | 16 | 32.00 |
| ಇತರೆ | 13 | 26.00 |
| **ಒಟ್ಟು** | **50** | **100.00** |

ಮೇಲ್ಕಂಡ ಕೋಷ್ಟಕದಲ್ಲಿ ಬ್ಯಾಂಕುಗಳಲ್ಲಿ ಲಭ್ಯವಿರುವ ಮೂಲಭೂತ ಸೌಲಭ್ಯಗಳ ಕುರಿತು ವಿವರಿಸಲಾಗಿದೆ. ಒಟ್ಟು 50 ಜನ ಮಾಹಿತಿದಾರರಲ್ಲಿ ಶೇಕಡ 42ರಷ್ಟು ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇರುವುದಾಗಿ ತಿಳಿಸಿದರೆ, ಶೇಕಡ 32ರಷ್ಟು ವಿಶ್ರಾಂತಿ ಕೊಠಡಿ ಸೌಲಭ್ಯ ಇರುವುದಾಗಿ ಮತ್ತು ಶೇಕಡ 26ರಷ್ಟು ಇತರೆ ಸೌಲಭ್ಯಗಳಾದ ಕಾಫಿ, ಟೀ, ಕುಡಿಯುವ ನೀರು ಸೌಲಭ್ಯಗಳಿವೆ ಎಂದು ತಿಳಿಸಿದ್ದಾರೆ.

**ಕೋಷ್ಟಕ 5: ಗ್ರಾಹಕರ ಮತ್ತು ನೌಕರರ ನಡುವಿನ ಸಂಬಂಧದ ವಿವರ**

| ಗ್ರಾಹಕರ ಮತ್ತು ನೌಕರರ ನಡುವಿನ ಸಂಬಂಧ | ಆವೃತ್ತಿ | ಶೇಕಡವಾರು |
|---|---|---|
| ವ್ಯವಹಾರಿಕವಾಗಿ | 46 | 92.00 |
| ಯಾವುದೇ ಅಭಿಪ್ರಾಯ ವ್ಯಕ್ತಪಡಿಸಿಲ್ಲದವರು | 04 | 08.00 |
| **ಒಟ್ಟು** | **50** | **100.00** |

ಮೇಲ್ಕಂಡ ಕೋಷ್ಟಕದಲ್ಲಿ ನೌಕರರ ಮತ್ತು ಗ್ರಾಹಕರ ನಡುವಿನ ಸಂಬಂಧದ ವಿವರವನ್ನು ತಿಳಿಸಲಾಗಿದೆ. ಒಟ್ಟು ಸಂದರ್ಶಿತರಲ್ಲಿ ಶೇಕಡ 92ರಷ್ಟು ವ್ಯವಹಾರಿಕವಾಗಿ ಸಂಬಂಧವಿರುವುದಾಗಿ ತಿಳಿಸಿದ್ದಾರೆ. ಕಾರಣ ಬ್ಯಾಂಕ್ ನೌಕರರಿಗೆ ಭಾಷೆ ಸಮಸ್ಯೆ ಇರುವುದರಿಂದ, ಸಮಯದ ಅಭಾವದಿಂದ, ಪದೇ ಪದೇ ವರ್ಗಾವಣೆಯಾಗುವುದರಿಂದ ಗ್ರಾಹಕರೊಂದಿಗೆ ಬ್ಯಾಂಕ್ ನೌಕರರು ವ್ಯವಹಾರಿಕ ಸಂಬಂಧವನ್ನು ಮಾತ್ರ ಹೊಂದಿರುವುದು ತಿಳಿದುಬಂದಿದೆ. ಅಲ್ಲದೆ ಕಡಿಮೆ ಪ್ರಮಾಣದಲ್ಲಿ ಶೇಕಡ 8ರಷ್ಟು ಯಾವುದೇ ಅಭಿಪ್ರಾಯ ವ್ಯಕ್ತಪಡಿಸಿಲ್ಲದಿರುವುದು ಕಂಡುಬಂದಿದೆ.

**ವ್ಯಕ್ತವಾದ ಅಂಶಗಳು**

- ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ ಭಾಷೆಯ ಸಮಸ್ಯೆ ಇದ್ದು, ಗ್ರಾಹಕರೊಂದಿಗೆ ವ್ಯವಹರಿಸುವಾಗ ಸಮಸ್ಯೆಯುಂಟಾಗುತ್ತಿರುವುದು ಕಂಡುಬಂದಿದೆ.
- ಗ್ರಾಮೀಣ ಪ್ರದೇಶದಲ್ಲಿ ಮತ್ತು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬ್ಯಾಂಕುಗಳಲ್ಲಿ ಮಹಿಳೆಯರಿಗೆ ಪ್ರತ್ಯೇಕವಾದ

ವಿಶ್ರಾಂತಿ ಕೊಠಡಿ ಮತ್ತು ಶೌಚಾಲಯ ವ್ಯವಸ್ಥೆ ಇಲ್ಲದಿರುವುದು ಕಂಡುಬಂದಿದೆ.

- ಆನ್‌ಲೈನ್ ಬ್ಯಾಂಕಿಂಗ್ ಜಾರಿಯಾದ ನಂತರ ಬ್ಯಾಂಕುಗಳಲ್ಲಿ ಕೆಲಸದ ಒತ್ತಡ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿರುವುದು ತಿಳಿದುಬಂದಿದೆ.

**ಸಲಹೆಗಳು**

- ಬ್ಯಾಂಕುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳೆಯರಿಗೆ ವಿಶ್ರಾಂತಿ ಕೊಠಡಿಯ ಅಗತ್ಯವಿರುತ್ತದೆ.
- ಗ್ರಾಹಕರು ಮಹಿಳಾ ನೌಕರರೊಂದಿಗೆ ವ್ಯವಹರಿಸುವಾಗ ಮತ್ತು ನೌಕರರಿಗೆ ಭಾಷೆಯ ಸಮಸ್ಯೆ ಇರುವುದರಿಂದ ಗ್ರಾಹಕರು ಸ್ವಲ್ಪ ಮಟ್ಟಿನ ಶಾಂತಿ, ತಾಳ್ಮೆ ಮತ್ತು ವಿಶ್ವಾಸದಿಂದ ವ್ಯವಹರಿಸಬೇಕಾಗುತ್ತದೆ.

ಒಟ್ಟಾರೆಯಾಗಿ, ಬ್ಯಾಂಕುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ನೌಕರರು 2–3 ವರ್ಷಗಳಿಗೊಮ್ಮೆ ವರ್ಗಾವಣೆಯಾಗುವುದರಿಂದ ಭಾಷೆಯ ಸಮಸ್ಯೆಯನ್ನು ಎದುರಿಸುತ್ತಿರುವುದು ಕಂಡುಬಂದಿದೆ. ಪ್ರಯಾಣ, ಪ್ರಯಾಸದ ದುಡಿಮೆ, ಒತ್ತಡ, ಗ್ರಾಹಕರ ಕಿರಿಕಿರಿ, ಮನೆಯ ಪಾಲನೆ ಎಲ್ಲವೂ ಒಟ್ಟಿಗೆ ನಿರ್ವಹಿಸಬೇಕಾಗಿರುವುದರಿಂದ ಮಹಿಳೆಯರಿಗೆ ಪಾತ್ರ ಸಂಘರ್ಷ ಉಂಟಾಗುತ್ತದೆ. ಸ್ವಲ್ಪ ಮಟ್ಟಿಗಾದರೂ ಗ್ರಾಹಕರು ನೌಕರರೊಂದಿಗೆ ವಿಶ್ವಾಸದಿಂದ ವ್ಯವಹರಿಸಬೇಕಾದ ಅಗತ್ಯತೆ ಇರುವುದು ತಿಳಿದುಬಂದಿದೆ.

**ಪರಾಮರ್ಶನ ಗ್ರಂಥಗಳು**


- ಭಾರತಿ, ಎಂ. (2011). *ಮಹಿಳೆ ಮತ್ತು ಸಾಧನೆಯ ಹಾದಿ.* ವಾಚಸ್ಪತಿ ಪ್ರಕಾಶನ.
- ಚಂದ್ರಶೇಖರ್, ಸಿ.ಆರ್. (2002). *ಮಹಿಳೆಯರ ಮತ್ತು ಮಕ್ಕಳ ಮಾನಸಿಕ ಸಮಸ್ಯೆಗಳು.* ಲೋಕ ಶಿಕ್ಷಣ ಟ್ರಸ್ಟ್.
- ಇಂದಿರಾ ಜೈಪ್ರಕಾಶ. *ಮಹಿಳೆ, ದುಡಿಮೆ ಮತ್ತು ಬಿಡುವು.* ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ.
- ಸಬಿಹಾ ಭೂಮಿಗೌಡ (2019). *ಮಹಿಳೆ ಇಂದಿನ ಸವಾಲುಗಳು.* ಲಡಾಯಿ ಪ್ರಕಾಶನ.
- ಸರೋಜ, ಕೆ. (2004). *ಮಹಿಳೆ ಮತ್ತು ಸಮೂಹ ಮಾಧ್ಯಮಗಳು.* ಕನ್ನಡ ವಿಶ್ವವಿದ್ಯಾಲಯ.
- ಶಿವಚಿತ್ರಪ್ಪ, ಕೆ. (2005). *ಮಹಿಳೆ ಮತ್ತು ಅಭಿವೃದ್ಧಿ.* ಚಿನ್ಮಯಿ ಪ್ರಕಾಶನ.
- ಶಿವಚಿತ್ತಪ್ಪ, ಕೆ. (2011). *ಮಹಿಳಾ ಅಭಿವೃದ್ಧಿಯ ಆಯಾಮಗಳು.* ಜ್ಞಾನೋದಯ ಪಬ್ಲಿಕೇಷನ್ಸ್.
- ಶ್ರೀಮತಿ ಹೆಚ್.ಎಸ್. (ಅನು) (2001). *ಆಧುನಿಕ ಭಾರತದಲ್ಲಿ ಮಹಿಳೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಸುಮಂಗಲಾ ಅತ್ತಿಗೇರಿ. (2010). *ಕೃಷಿ ಜನಪದ ಮತ್ತು ಮಹಿಳೆ.* ಕರ್ನಾಟಕ ಜಾನಪದ ಅಕಾಡೆಮಿ.
- Friro, J. V. K. (2019). *Challenges Faced by Bank Employees working with e-Banking.*
- Mishra (1994). *Problems and Prospects of Working Women in Urban India.*
- Mourya, S. D. (1988). *Women in India.* Chug Publications.
- Roy, R. (2009). *Empowerment of Women in India, Myth and Reality*. Jananda Prakashana.
- Sharma, A. (1990). *Modernization Status of Working Women in India.* Commonwealth Publishers.